ವಿಷಯ: ಕೊಡಗಿನಲ್ಲಿರುವ ಪೊಲೀಸ್ ವಸತಿ ಗೃಹಗಳು

2790 (3328)

ಶ್ರೀ ಎಂ.ಸಿ.ಅಪ್ಪಚ್ಚು ರಂಜನ್ (ಸೋಮವಾರಪೇಟೆ): ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಪೊಲೀಸ್ ಇಲಾಖೆಯ ಎಷ್ಟು ನೌಕರರಿಗೆ ವಸತಿ ಸೌಕರ್ಯ ಇರುತ್ತದೆ ಹಾಗೂ ಎಷ್ಟು ನೌಕರರಿಗೆ ವಸತಿ ಸೌಕರ್ಯವಿರುವುದಿಲ್ಲ? (ವಿವರ ನೀಡುವುದು)

ಆ) ಸದರಿ ಎಲ್ಲಾ ನೌಕರರಿಗೂ ವಸತಿ ಸೌಕರ್ಯ ಒದಗಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಇ) ಕೊಡಗಿನಲ್ಲಿ ಎಷ್ಟು ನೌಕರರಿಗೆ ವಸತಿ ಕಲ್ಪಿಸಿಕೊಡಲಾಗಿದೆ?

ಈ) ವಸತಿ ದುರಸ್ಥಿಗಾಗಿ ಸರ್ಕಾರ ಆಯವ್ಯಯದಲ್ಲಿ ಎಷ್ಟು ಹಣ ಮೀಸಲಾಗಿಟ್ಟಿರುತ್ತದೆ?

ಶ್ರೀ ಆರ್.ರೋಷನ್‌ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು):

ಅ) 25785 ಪೊಲೀಸ್ ಸಿಬ್ಬಂದಿಗೆ ವಸತಿ ಸೌಕರ್ಯ ಒದಗಿಸಲಾಗಿದೆ. 39403 ಸಿಬ್ಬಂದಿಗೆ ವಸತಿ ಸೌಕರ್ಯ ಇರುವುದಿಲ್ಲ.

ಆ) 1993-94ನೇ ಸಾಲಿನಲ್ಲಿ 2984 ವಸತಿ ಗೃಹ ಹಾಗೂ 1996-97ನೇ ಸಾಲಿನಲ್ಲಿ 2292 ವಸತಿ ಗೃಹಗಳನ್ನು ನಿರ್ಮಾಣ ಮಾಡಲು ರಾಜ್ಯ ಪೊಲೀಸ್ ಘಟಕಗಳಿಗೆ ಸರ್ಕಾರದ ಅನುಮೋದನೆ ನೀಡಲಾಗಿದೆ. ಅಲ್ಲದೆ ತ್ವರಿತ ಕಾರ್ಯಕ್ರಮ ಯೋಜನೆ. ಅಡಿಯಲ್ಲಿ ಪೊಲೀಸ್ ಸಿಬ್ಬಂದಿಗಳಿಗೆ ಹೆಚ್ಚಿನ ವಸತಿ ಗೃಹ ಒದಗಿಸಲು 10,000 ವಸತಿ ಗೃಹಗಳನ್ನು ನಿರ್ಮಾಣ ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) 372 ಪೊಲೀಸ್ ಸಿಬ್ಬಂದಿಗೆ ವಸತಿ ಸೌಕರ್ಯ ಕಲ್ಪಿಸಲಾಗಿದೆ.

ಈ) ರೂ. 3.67 ಕೋಟಿ ಅನುದಾನವನ್ನು ವಸತಿ ದುರಸ್ತಿಗಾಗಿ 1997-98ನೇ ಸಾಲಿನ ಆಯವ್ಯಯದಲ್ಲಿ ಮೀಸಲಾಗಿಟ್ಟಿರುತ್ತದೆ.

ವಿಷಯ: ಶಿವಮೊಗ್ಗ ನಗರ ವ್ಯಾಪ್ತಿಯಲ್ಲಿರುವ ಪೊಲೀಸ್ ಠಾಣೆಗಳ ಕುರಿತು

2774 (4116)

ಶ್ರೀ ಅಯನೂರು ಮಂಜುನಾಥ್ (ಹೊಸನಗರ): ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ

ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ನಗರದಲ್ಲಿರುವ ದೊಡ್ಡಪೇಟೆ ಪೊಲೀಸ್ ಠಾಣೆಯ ವ್ಯಾಪ್ತಿಯೇನು; ಇಲ್ಲಿಯ ಜನಸಂಖ್ಯೆ ಎಷ್ಟು?

ಆ) ಗ್ರಾಮಾಂತರ ಠಾಣೆಯ ವ್ಯಾಪ್ತಿಯೇನು? ಎಷ್ಟು ಗ್ರಾಮಗಳು ಹಾಗೂ ಜನಸಂಖ್ಯೆಯನ್ನು ಹೊಂದಿದೆ?

ಇ) ಪೊಲೀಸ್ ಠಾಣೆಗಳಲ್ಲಿರುವ ಸಿಬ್ಬಂದಿ ಎಷ್ಟು? (ವಿವರ ನೀಡುವುದು)

ಈ) ಶಿವಮೊಗ್ಗ ನಗರದ ಹೊರಭಾಗಗಳಾದ ಗೋಪಾಳ, ಹುಡ್ಕೋ ಕಾಲೋನಿ ದೂರವಾಣಿ ನಗರ, ದೇವರಾಜ ಅರಸ್ ಬಡಾವಣೆ, ಸಹ್ಯಾದ್ರಿ ಬಡಾವಣೆ ಮುಂತಾದ ಕಡೆಗಳಲ್ಲಿ ಕಳ್ಳತನ, ಗೂಂಡಾಗಿರಿ, ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದ ಪಕ್ಷದಲ್ಲಿ ಈ ಭಾಗಗಳಲ್ಲಿ ಪ್ರತ್ಯೇಕ ಪೊಲೀಸ್ ಠಾಣೆಗಳನ್ನಾಗಲಿ ಅಥವಾ ಔಟ್ ಪೋಸ್ಟ್‌ಗಳನ್ನಾಗಲೀ ಕೂಡಲೇ ತೆರೆಯಲು ಸರ್ಕಾರ ಪರಿಶೀಲಿಸುವುದೇ?

ಶ್ರೀ ಆರ್.ರೋಷನ್‌ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು):

ಅ) ದೊಡ್ಡಪೇಟೆ ಪೊಲೀಸ್ ಠಾಣೆಯ ವ್ಯಾಪ್ತಿ 32 ಚ.ಕಿ.ಮೀ.ಈ ವ್ಯಾಪ್ತಿಯ ಜನಸಂಖ್ಯೆ 1,23,000.

ಆ) ಶಿವಮೊಗ್ಗ ಗ್ರಾಮಾಂತರ ಠಾಣೆಯ ವ್ಯಾಪ್ತಿ 674.22 ಚ.ಕಿ.ಮೀ. ಹೊಂದಿದ್ದು, 141 ಹಳ್ಳಿಗಳನ್ನು ಮತ್ತು 1,49,609 ಜನಸಂಖ್ಯೆಯನ್ನು ಹೊಂದಿದೆ.

ಇ) ಶಿವಮೊಗ್ಗ ನಗರದ ದೊಡ್ಡಪೇಟೆ ಹಾಗೂ ಶಿವಮೊಗ್ಗ ಗ್ರಾಮಾಂತರ ಪೊಲೀಸ್ ಠಾಣೆ ಒಟ್ಟು ಸಿಬ್ಬಂದಿ ಸಂಖ್ಯೆ: 106.

ಈ ಪೊಲೀಸ್ ಠಾಣೆಗಳಲ್ಲಿರುವ ಸಿಬ್ಬಂದಿ ಬಲ ಈ ಕೆಳಕಂಡಂತಿದೆ.

	ಪೊಲೀಸ್ ಠಾಣೆ	ಪಿಎಸ್‌ಐ	ಎಎಸ್‌ಐ	ಹೆಚ್‌ಸಿ	ಪಿಸಿ
1)	ದೊಡ್ಡಪೇಟೆ	2	3	18	45
2)	ಶಿವಮೊಗ್ಗ (ಗ್ರಾ)	2	2	9	25
		4	5	27	70

ಈ) ಹೌದು.

ಉ) ಈ ಭಾಗಗಳನ್ನೊಳಗೊಂಡಂತೆ ತುಂಗಾನಗರದಲ್ಲಿ ಪೊಲೀಸ್ ಠಾಣೆ ತೆರೆಯುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ವಿಷಯ: ಶಿವಮೊಗ್ಗ ಹಾಗೂ ಹೊಸನಗರ ತಾಲ್ಲೂಕುಗಳಲ್ಲಿ ವಿದ್ಯುತ್ ಯೋಜನೆಯಿಂದ ಮುಳುಗಡೆಯಾದ ಪ್ರದೇಶದ ಕುರಿತು.

2795 (4115)

ಶ್ರೀ ಆಯನೂರು ಮಂಜುನಾಥ್ (ಹೊಸನಗರ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸನಗರ ಕ್ಷೇತ್ರದ ಶಿವಮೊಗ್ಗ ತಾಲ್ಲೂಕು ಮತ್ತು ಹೊಸನಗರ ತಾಲ್ಲೂಕಿನಲ್ಲಿರುವ ವಿದ್ಯುತ್‌ರಹಿತ ಮಜಿರೆ ಗ್ರಾಮಗಳು ಎಷ್ಟು? ಹಾಗೂ ಯಾವುವು? (ವಿವರ ತಿಳಿಸುವುದು)

ಆ) ವಿದ್ಯುತ್ ರಹಿತ ಮಜಿರೆ ಗ್ರಾಮಗಳಿಗೆ ವಿದ್ಯುತ್ ಒದಗಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಯಾವಾಗಿನಿಂದ ವಿದ್ಯುತ್ ನೀಡಲಾಗುವುದು?

ಶ್ರೀ ಶರಣಬಸಪ್ಪ ದರ್ಶನಾಪೂರ್ (ಇಂಧನ ರಾಜ್ಯ ಸಚಿವರು):

ಅ) ಹೊಸನಗರ ಕ್ಷೇತ್ರದ ಶಿವಮೊಗ್ಗ ತಾಲ್ಲೂಕಿನಲ್ಲಿ ವಿದ್ಯುತ್ ರಹಿತ ಮಜಿರೆ ಗ್ರಾಮಗಳು ಯಾವುವೂ ಇಲ್ಲ. ಆದರೆ ಹೊಸನಗರ ಕ್ಷೇತ್ರದ ಹೊಸನಗರ ತಾಲ್ಲೂಕಿನಲ್ಲಿ 775 ವಿದ್ಯುತ್‌ರಹಿತ ಮಜಿರೆ ಗ್ರಾಮಗಳು ಇರತ್ತವೆ. ಈ ಮಜಿರೆ ಗ್ರಾಮಗಳ ವಿವರವಾದ ಪಟ್ಟಿಯನ್ನು ಇದಕ್ಕೆ ಲಗತ್ತಿಸಲಾಗಿದೆ.

ಆ) ವಿದ್ಯುತ್‌ರಹಿತ ಮಜಿರೆ ಗ್ರಾಮಗಳಿಗೆ ವಿದ್ಯುತ್ ಒದಗಿಸಲು ಈಗಾಗಲೇ ಒಂದು ಯೋಜನೆಯನ್ನು ಗ್ರಾಮೀಣ ವಿದ್ಯುದ್ದೀಕರಣ ಯೋಜನೆಯಡಿಯಲ್ಲಿ (ಆರ್.ಇ.ಸಿ. ಸ್ಕೀಂನಡಿಯಲ್ಲಿ) ಈ ತಾಲ್ಲೂಕಿಗೆ ತಯಾರಿಸಲಾಗಿದೆ. ಈ ಯೋಜನೆಯಲ್ಲಿ 87 ವಿದ್ಯುತ್‌ರಹಿತ ಮಜಿರೆ ಗ್ರಾಮಗಳನ್ನು ಮತ್ತು 7 ಹರಿಜನ ಬಸ್ತಿಗಳನ್ನು ವಿದ್ಯುದ್ದೀಕರಣಕ್ಕಾಗಿ ಸೇರಿಸಲಾಗಿದೆ. ಇದುವರೆಗೆ ಈ ಸ್ಕೀಂನಡಿಯಲ್ಲಿ 22 ಮಜಿರೆ ಗ್ರಾಮಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಪ್ರಸಕ್ತ ಸಾಲಿಗೆ (1997-98) ಈ ತಾಲ್ಲೂಕಿನಲ್ಲಿ ವಿದ್ಯುದ್ದೀಕರಣ ಮಾಡಲು 20 ಮಜಿರೆ ಗ್ರಾಮಗಳ ಗುರಿಯನ್ನು ನಿಗಧಿಪಡಿಸಲಾಗಿದೆ.

ಮುಂಬರುವ ವರ್ಷಗಳಲ್ಲಿ ಮಂಡಳಿಗೆ ಒದಗಿಬರುವ ಆರ್ಥಿಕ ನೆರವು,